ಹೇಳುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮಕ್ಷೇತ್ರದ ಗ್ರಾಮಗಳಲ್ಲಿ ಸರ್ಕಾರ ಬಸಗಳನ್ನು ಒದಗಿಸಲಾಗಿತ್ತು, ಆದರೆ ಈಗ ಗ್ರಾಮೀಣ ಪ್ರದೇಶದಲ್ಲಿ ಬಸಗಳನ್ನು ಹಿಂದಕ್ಕೆ ಪಡೆದಿದ್ದಾರೆ. ಆದ್ದರಿಂದ ಅದನ್ನು ಮತ್ತೆ ರೆಸ್ಟೋರ್ ಮಾಡಿಕೊಡಬೇಕೆಂದು ಕೂಡ ಕೇಳಿದ್ದೇವೆ. ಆದರೆ ಈಗಾಗಲೇ ನಮ್ಮಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂತಹ ನೇರಳೆ, ಹಳೇಪುರ, ಕೋಡನಾಗಪುರ ಮತ್ತು ಹುಸನೂರು ಕಗ್ಗನವಾಡ ಗ್ರಾಮಗಳಲ್ಲಿ ಸರ್ಕಾರಿ ಬಸುಗಳನ್ನು ವಿತಡ್ರಾ ಮಾಡಿದ್ದಾರೆ. ಅದನು ರೆಸ್ಟೋರ್ ಮಾಡಬೇಕೆಂದು ಹೇಳಿದೆ. ಆದರೆ ಅವರು ಅದು ರಾಷ್ಟ್ರೀಕೃತ ವಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅಲ್ಲಿ ಬಸಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಸಾರಿಗೆ ಸಚಿವರು ಉತ್ತರ ಕೊಡಬೇಕೆಂದು ತಮ್ಮಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಇದು ನಾನು ಮನಾಪಲಿ ಏರಿಯಾ ಇರುವುದರಿಂದ ನಮ್ಮ ಬಸಗಳನ್ನು ಅಲ್ಲಿ ಓಡಿಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಆದರೆ ಬೇರೆ ಊರುಗಳಿಂದ ಸಂತೇಮರಹಳ್ಳಿ ಮುಖಾಂತರ ಹೋಗತಕ್ಕಂತಹ 11 ಬಸ್ಸುಗಳು ಅಲ್ಲಿ ಓಡುತ್ತಿವೆ. ಬೇರೆ ಬಸ್ಸುಗಳನ್ನು ಸಂತೆಮರಹಳ್ಳಿಗೆ ಓಡಿಸುತ್ತಿದ್ದರೆ ಮಾತ್ರ ಅಲ್ಲಿಗೆ ಹೋಗುವ ಪ್ರಶ್ನೆ ಬರುತ್ತದೆ, ಅಥವಾ ಹೊಸದಾಗಿ ಕೊಡುವ ಪ್ರಶ್ನೆ ಬರುತ್ತದೆ. ಆದರೂ ಸಹಿತ ಕೆಲವೊಂದು ವಿಶೇಷವಾದ ಪ್ರಕರಣಗಳಲ್ಲಿ ಏನಾದರೂ ಅನುಕೂಲ ಮಾಡುವುದಕ್ಕೆ ಸಾಧ್ಯವಿದ್ದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : ಸಂತೇಮರಹಳ್ಳಿ ಮುಖೇನ ಎಂದು ಪ್ರಶ್ನೆಯಲ್ಲಿ ಕೇಳಲಿಲ್ಲ, ಸಂತೆಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರತಕ್ಕಂತಹ ಬಸ್ಸುಗಳನ್ನು ರೆಸ್ಟೋರ್ ಮಾಡಬೇಕೆಂದು ಹೇಳಿದ್ದೇನೆ. ಅದನ್ನು ಪರಿಶೀಲನೆ ಮಾಡಿ ದಯಮಾಡಿ ಅದನ್ನು ರೆಸ್ಟೋರ್ ಮಾಡಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕಿ ಗುರುತಿಲ್ಲದ ಪ್ರಶ್ನೆಗಳ ದಿನಾಂಕ 1994ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ "18 ಪ್ರಶ್ನೆಗಳ ಉತ್ತರವನ್ನು ತಮ್ಮ ಅನುಮತಿ ಪಡೆದು ಸದನದಲ್ಲಿ ಮಂಡಿಸುತ್ತಿದ್ದೇನೆ.

ಬಸ್ ಪ್ರಯಾಣದರ ಕುರಿತು.

561 - ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸ್ ಪ್ರಯಾಣ ದರವನ್ನು ಸರ್ಕಾರ ನಿರ್ಧಾರ ಮಾಡಿದೆಯೇ?